## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1171/2022

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ದೇವರಾಜ್ ಟಿ. ವಿ | CW: 18 | PW: 6 |
| ತಂದೆಯ ಹೆಸರು | : | ಯಲ್ಲಪ್ಪ | | |
| ವಯಸ್ಸು | : | 45 | | |
| ವೃತ್ತಿ | : | ಸಿಪಿಐ ಸಂಚಾರಿ ವೃತ್ತ, ಶಿವಮೊಗ್ಗ | | |
| ವಾಸಸ್ಥಳ | : | ಶಿವಮೊಗ್ಗ | | |

ದಿನಾಂಕಃ 05.05.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ತೆಗೆದುಕೊಳ್ಳಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು ದಿಃ 10.10.2019 ರಿಂದ ದಿಃ 30.09.2022 ರವರೆಗೆ ಹೊನ್ನಾಳಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04.03.2022 ರಂದು ಈ ಕೇಸಿನ ಕಡತವನ್ನು ಚಾಸಾ 17 ರವರಿಂದ ಪಡೆದುಕೊಂಡು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 10 ಮತ್ತು 11 ರವರಿಗೆ ಪಂಚರಾಗಿ ಸಹಕರಿಸುವಂತೆ ನೋಟೀಸ್ ಜಾರಿ ಮಾಡಿ ಅವರು ಒಪ್ಪಿಕೊಂಡ ಮೇರೆಗೆ ಅವರ ಸಮಕ್ಷಮ ಚಾಸಾ

1ರವರು ಸ್ಥಳ ತೋರಿಸಿದ ಮೇರೆಗೆ ಮಧ್ಯಾಹ್ನ 3 ರಿಂದ 4 ರ ಸಮಯದಲ್ಲಿ ಸ್ಥಳ ಪಂಚನಾಮೆ ಜರುಗಿಸಿ , ಕಚ್ಚಾ ನಕಾಶೆ ತಯಾರಿಸಿ , ಪೋಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಚೇಲೂರು ಉಪ ಪೋಲೀಸ್ ಠಾಣಾ ಆವರಣದಲ್ಲಿ ಸದರಿ ಪಂಚರ ಸಮಕ್ಷಮ ಅಪಘಾತಕ್ಕೊಳಗಾದ ಕೆಎ 17 ಇ ಜೆಡ್ 7147 ನಂಬರ್ ನ ಹೀರೋ ಸ್ಪೆಂಡರ್ ಮೋಟಾರ್ ಸೈಕಲ್ ನ್ನು ಸಂಜೆ 4.30 ರಿಂದ 5.15 ಗಂಟೆ ಸಮಯದಲ್ಲಿ ಅಮಾನತ್ತುಪಂಚನಾಮೆ ಜರುಗಿಸುವ ಮೂಲಕ ಅಮಾನತ್ತುಪಡಿಸಿಕೊಂಡು ಪೋಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಚಾಸಾ 15 ರಿಂದ 65 ಬಿ ಪ್ರಮಾಣ ಪತ್ರವನ್ನು ಹಾಗೂ ಚಾಸಾ 1 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ 31.03.2022 ರಂದು ವಾಹನದ ಮಾಲೀಕರಾದ ಕಿರಣ್ ರವರಿಗೆ ಪೋಲೀಸ್ ನೋಟೀಸ್ ನೀಡಿ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿ ಬಾಂಡ್ ನ್ನು ಪಡೆದುಕೊಂಡು ಸದರಿ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿಃ 11.04.2022 ರಂದು ಚಾಸಾ 12 ರವರಿಂದ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 21.06.2022 ರಂದು ಚಾಸಾ 13 ರವರಿಂದ ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 14 ರವರಿಂದ ಐಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ 1 ಸ್ಥಳ ಪಂಚನಾಮೆ, ನಿಪಿ 2 ಕಚ್ಚಾ ನಕಾಶೆ, ನಿಪಿ 3 ವಾಹನ ಪಂಚನಾಮೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 1(ಸಿ), 2(ಸಿ), 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 4 ರಿಂದ 7 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಪಿಎಂ ವರದಿಯನ್ನು ನಿಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು. ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ನಿಪಿ 15 ಎಂದು , ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಯಿತು. ಅಪಘಾತಪಡಿಸಿದ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದಂತೆ ಕಿರಣ್ ರವರಿಗೆ ನೀಡಿದ ಪೊಲೀಸ್ ನೋಟೀಸ್, ಅವರಿಂದ

ಪಡೆದುಕೊಂಡ ಸಮಜಾಯಿಷಕೆ ಮತ್ತು ಇಂಡಿಮಿನಿಟಿ ಬಾಂಡ್ ನ್ನು ನಿಪಿ 16 ರಿಂದ 18 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 16(ಎ) ಯಿಂದ 18(ಎ) ಎಂದು ಗುರುತಿಸಲಾಯಿತು. ಐಎಂವಿ ವರದಿಯನ್ನು ನಿಪಿ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು. 65 ಬಿ ಪ್ರಮಾಣ ಪತ್ರವನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 20(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಸ್ ಬಿ ಪಿ ವಕೀಲರಿಂದಃ-

ದಿಃ 04.03.2022 ರಂದು ಈ ಕೇಸಿನ ಕಡತವನ್ನು ಚಾಸಾ 17 ರವರಿಂದ ಪಡೆದುಕೊಂಡು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 10 ಮತ್ತು 11 ರವರಿಗೆ ಪಂಚರಾಗಿ ಸಹಕರಿಸುವಂತೆ ನೋಟೀಸ್ ಜಾರಿ ಮಾಡಿ ಅವರು ಒಪ್ಪಿಕೊಂಡ ಮೇರೆಗೆ ಅವರ ಸಮಕ್ಷಮ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಮಧ್ಯಾಹ್ನ 3 ರಿಂದ 4 ರ ಸಮಯದಲ್ಲಿ ಸ್ಥಳ ಪಂಚನಾಮೆ ಜರುಗಿಸಿ , ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ಚೇಲೂರು ಉಪ ಪೋಲೀಸ್ ಠಾಣಾ ಆವರಣದಲ್ಲಿ ಸದರಿ ಪಂಚರ ಸಮಕ್ಷಮ ಅಪಘಾತಕ್ಕೊಳಗಾದ ಕೆಎ 17 ಇ ಜೆಡ್ 7147 ನಂಬರ್ ನ ಹೀರೋ ಸ್ಪೆಂಡರ್ ಮೋಟಾರ್ ಸೈಕಲ್ ನ್ನು ಸಂಜೆ 4.30 ರಿಂದ 5.15 ಗಂಟೆ ಸಮಯದಲ್ಲಿ ಅಮಾನತ್ತುಪಂಚನಾಮೆ ಜರುಗಿಸುವ ಮೂಲಕ ಅಮಾನತ್ತುಪಡಿಸಿಕೊಂಡು ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ಚಾಸಾ 15 ರಿಂದ 65 ಬಿ ಪ್ರಮಾಣ ಪತ್ರವನ್ನು ಹಾಗೂ ಚಾಸಾ 1 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿಃ 31.03.2022 ರಂದು ವಾಹನದ ಮಾಲೀಕರಾದ ಕಿರಣ್ ರವರಿಗೆ ಪೋಲೀಸ್ ನೋಟೀಸ್ ನೀಡಿ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿ ಬಾಂಡ್ ನ್ನು ಪಡೆದುಕೊಂಡು ಸದರಿ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ

11.04.2022 ರಂದು ಚಾಸಾ 12 ರವರಿಂದ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 21.06.2022 ರಂದು ಚಾಸಾ 13 ರವರಿಂದ ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ಚಾಸಾ 14 ರವರಿಂದ ಐಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ತನಿಖೆ ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.